**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**CC No. 326/2023**

**PW-3 CW-1**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಚೈತ್ರಾ ಗಂಡ ಅಮರೇಶ ತಂದೆ ಗಂಗಣ್ಣ |
| ವಯಸ್ಸು | ಃ | 21 ವರ್ಷ |
| ಉದ್ಯೋಗ | ಃ | ಗೃಹಿಣಿ |
| ವಾಸಸ್ಥಳ | ಃ | ಮಲದಕಲ್ |
| ಪ್ರಮಾಣಿಕರಿಸಿದ ದಿನಾಂಕ | ಃ | 27-02-2025 |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ಚಾಸಾ-2 ಮತ್ತು 3 ರವರ ಪರಿಚಯ ಇರುವುದಿಲ್ಲ. ಚಾಸಾ-4 ನನ್ನ ತಂದೆ. ಚಾಸಾ-5 ನನ್ನ ತಾಯಿ. ಚಾಸಾ-6 ಮತ್ತು 7 ರವರ ಪರಿಚಯ ಇರುವುದಿಲ್ಲ. ಆರೋಪಿತರ ಪರಿಚಯ ಇರುತ್ತದೆ.

ನಾನು ನನ್ನ ತಂದೆ-ತಾಯಿ, ತಮ್ಮ, ತಂಗಿ ಮತ್ತು ಅಜ್ಜಿಯೊಂದಿಗೆ ಮಲದಕಲ್ ಗ್ರಾಮದಲ್ಲಿ ವಾಸವಾಗಿದ್ದು 1ನೇ ಆರೋಪಿ ಚಂದ್ರಶೇಖರನಿಗೆ ನನ್ನನ್ನು ಮದುವೆ ಮಾಡಿಕೊಡುವಂತೆ ನನ್ನ ತಂದೆ-ತಾಯಿಗೆ ಆರೋಪಿತರ ಮನೆಯವರು ಬಂದು ಕೇಳಿರುತ್ತಾರೆ, ಅದಕ್ಕೆ ನಮ್ಮ ಮನೆಯಲ್ಲಿ ಸದರಿ ಸಂಬಂಧವನ್ನು ನಿರಾಕರಿಸಿರುತ್ತಾರೆ. ನಂತರ ನಮ್ಮ ಮನೆಯಲ್ಲಿ ನನಗೆ ಮದುವೆ ಮಾಡಲು ಪ್ರಯತ್ನ ಮಾಡಿದ್ದು ಸದರಿ ಮದುವೆಯ ಪೂರ್ವದ ನಿಶ್ಚಯ ಕಾರ್ಯಕ್ರಮ ನಿಗಧಿಪಡಿಸಿದ ಒಂದು ವಾರದ ಮೊದಲು ಆರೋಪಿತರು ನನ್ನ ಬಗ್ಗೆ ಅಪಪ್ರಚಾರ ಮಾಡಿರುತ್ತಾರೆ. ಸದರಿ ವಿಷಯ ತಿಳಿದು ನನ್ನ ತಂದೆ ಮತ್ತು ಚಿಕ್ಕಪ್ಪ ಸಹ ಆರೋಪಿತರ ಮನೆಗೆ ಹೋಗಿ ನನ್ನ ಮಗಳ ಬಗ್ಗೆ ಅಪಪ್ರಚಾರ ಮಾಡಬೇಡಿ ಎಂದು ಆರೋಪಿತರಿಗೆ ಕಾಲು ಹಿಡಿದು ವಿನಂತಿ ಮಾಡಿಕೊಂಡಿರುತ್ತಾರೆ. ನಂತರ ಆರೋಪಿತರು 2-3 ದಿನ ಸುಮ್ಮನಿದ್ದು ನಂತರ ನಮ್ಮ ಮನೆಯವರು ದೇವದುರ್ಗ ತಾಲೂಕಿನ ಮಾತಪಳ್ಳಿ ಗ್ರಾಮದಲ್ಲಿ ನನ್ನ ಎಂಗೇಜ್‌ಮೆಂಟ್ ಕಾರ್ಯಕ್ರಮ ಮಾಡಿದ್ದು ಎಂಗೇಜ್‌ಮೆಂಟ್ ಆದ ನಂತರ ಆರೋಪಿತರು ನನ್ನೊಂದಿಗೆ ಎಂಗೇಜ್‌ಮೆಂಟ್ ಆದವರ ಅಣ್ಣನಿಗೆ ಫೇಕ್ ಫೋಟೋಗಳನ್ನು ಕಳುಹಿಸಿದ್ದು ಹಾಗೂ ನನ್ನ ಬಗ್ಗೆ ಅಪಪ್ರಚಾರ ಮಾಡಿದ್ದರಿಂದ ಸದರಿ ಎಂಗೇಜ್‌ಮೆಂಟ್ ಮುರಿದುಬಿದ್ದಿರುತ್ತದೆ. ನಂತರ ಗಬ್ಬೂರು ಠಾಣೆಗೆ ಹೋಗಿ ದಿನಾಂಕ 25-01-2023 ರಂದು ದೂರನ್ನು ನೀಡಿರುತ್ತೇವೆ. ಆರೋಪಿತರು ನನ್ನ ಮೂರು ಎಂಗೇಜ್‌ಮೆಂಟ್‌ಗಳನ್ನು ಮುರಿದುಬಿಳುವಂತೆ ಮಾಡಿರುತ್ತಾರೆ. ನಂತರ ನಮ್ಮ ಮನೆಯವರು ನನ್ನನ್ನು ಮದುವೆ ಮಾಡಿಕೊಟ್ಟ ನಂತರ ನನ್ನ ಗಂಡನಿಗೂ ಸಹ ಫೇಕ್ ಮೆಸೇಜ್‌ಗಳನ್ನು ಕಳುಹಿಸಿ ನನ್ನ ಗಂಡನಿಂದ ಸಹ ನನಗೆ ತೊಂದರೆ ಕೊಟ್ಟಿರುತ್ತಾರೆ.

ದಿನಾಂಕ 22-01-2023 ರಂದು ಬೆಳಿಗ್ಗೆ 11-00 ಗಂಟೆಗೆ ಆರೋಪಿತರು ನಮ್ಮ ಮನೆಗೆ ಬಂದು ನನ್ನ ತಾಯಿಗೆ ಅವಾಚ್ಯ ಶಬ್ದಗಳಿಂದ ಬೈದು ನನ್ನ ತಾಯಿಯ ಸೀರೆ ಸೆರಗನ್ನು ಹಿಡಿದು ಎಳೆದಾಡಿ ಅವಮಾನ ಮಾಡಿರುತ್ತಾರೆ. 1 ನೇ ಆರೋಪಿಯ ತಾಯಿ ಸರಸ್ವತಿ ನನ್ನ ಕೂದಲು ಹಿಡಿದು ಎಳೆದಾಡಿ ನನಗೆ ಹೊಡೆದಿರುತ್ತಾರೆ. ಆರೋಪಿತರು ನಮಗೆ ಹೊಡೆದಿದ್ದರಿಂದ ನಮಗೆ ಮೂಕಪೆಟ್ಟುಗಳಾಗಿರುತ್ತವೆ. ಆ ಕುರಿತು ದಿನಾಂಕ 25-01-2023 ರಂದು ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸದರಿ ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ದಿನಾಂಕ 25-01-2023 ರಂದೇ ಮಧ್ಯಾಹ್ನ ಪೊಲೀಸರು ನಮ್ಮ ಮನೆಗೆ ಬಂದಿದ್ದರು. ಮನೆಯಲ್ಲಿ ಚೆಕ್‌ಬಂದಿ ಬರೆದುಕೊಂಡು ಒಂದು ಫೋಟೋವನ್ನು ತೆಗೆದಿರುತ್ತಾರೆ ಹಾಗೂ ನನ್ನ ಒಂದು ಸಹಿ ಪಡೆದಿರುತ್ತಾರೆ. ಫೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್.ಎಮ್.ಆರ್ ವಕೀಲರಿಂದ.**

1 ನೇ ಆರೋಪಿ ಚಂದ್ರಶೇಖರನಿಗೆ ನಾನು ಸೋದರತ್ತೆಯ ಮೊಮ್ಮಗಳು ಆಗಬೇಕು ಎಂದರೆ ಸರಿ. 1 ನೇ ಆರೋಪಿ ಚಂದ್ರಶೇಖರ ನನಗೆ ಸೋದರ ಮಾವನಾಗಬೇಕು ಎಂದರೆ ಸರಿ. 1 ನೇ ಆರೋಪಿಯ ತಂದೆ ಅಮರಪ್ಪ ಮೃತರಾಗಿರುತ್ತಾರೆ. ಸದರಿ 1 ನೇ ಆರೋಪಿಯ ತಂದೆ ನನ್ನನ್ನು ಸಾಕಿ ಸಲುಹಿರುತ್ತಾನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಶರಣಗೌಡ ಕಂದಕೂರ ಎಮ್.ಎಲ್.ಎ ಇವರ ಕಾರಿನ ಚಾಲಕನಾಗಿ ಕೆಲಸ ಮಾಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 22-01-2023 ರಂದು ಸದರಿ ಎಮ್.ಎಲ್.ಎ ಇವರ ಅತ್ತೆಯ ಮಗಳ ಮದುವೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ದಿನ 1 ನೇ ಆರೋಪಿ ಎಮ್.ಎಲ್.ಎ ರವರೊಂದಿಗೆ ಸದರಿ ಮದುವೆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಎಂದರೆ ಸರಿಯಲ್ಲ, ಸಾಕ್ಷಿ ಗ್ರಾಮದಲಿಯೇ ಇದ್ದ ಎಂದು ನುಡಿಯುತ್ತಾರೆ. 1 ನೇ ಆರೋಪಿ ಮದುವೆಯ ಕಾರ್ಯಕ್ರಮದಲ್ಲಿ ಹಾಜರಿದ್ದ ಬಗ್ಗೆ ನನಗೆ ಗೊತ್ತಿದ್ದರೂ ಗ್ರಾಮದಲ್ಲಿಯೇ ಇದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯ ಅಣ್ಣ 2 ನೇ ಆರೋಪಿ ಹನುಮಂತ್ರಾಯ ಕಳೆದ 10 ವರ್ಷಗಳಿಂದ ಬಾಂಬೆದಲ್ಲಿ ಕಾರು ಚಾಲಕನಾಗಿ ಅಲ್ಲಿಯೇ ವಾಸವಿದ್ದ ಎಂದರೆ ಸರಿಯಲ್ಲ. 3 ನೇ ಆರೋಪಿತಳು ಸರಸ್ವತಿ ಮೆಟ್ಟಿಲಿನಿಂದ ಬಿದ್ದು ಕಾಲಿನಲ್ಲಿ ಮೂಳೆ ಮುರಿತ ಉಂಟಾಗಿ ಅನಾರೋಗ್ಯವಾಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸರಸ್ವತಿಯವರಿಗೆ ಮೂಳೆ ಮುರಿತವಾದ್ದರಿಂದ ಅಡ್ಡಾಡಲು ಬರದೇ ಇರುವುದರಿಂದ ಅವರ ಆರೈಕೆಯನ್ನು 4 ನೇ ಆರೋಪಿ ಅಕ್ಕಮ್ಮ ನೋಡಿಕೊಳ್ಳುತ್ತಿದ್ದು ಆರೋಪಿ 3 ಮತ್ತು 4 ರವರು ಮುಷ್ಠೂರು ಗ್ರಾಮದಲ್ಲಿಯೇ ಇರುತ್ತಾರೆ ಎಂದರೆ ಸರಿಯಲ್ಲ.

ನಾನು ದೂರನ್ನು ಬರೆದುಕೊಟ್ಟಿರುತ್ತೇನೆ. ಸದರಿ ದೂರು 03 ಪುಟಗಳದ್ದು ಇರುತ್ತದೆ. ದೂರನ್ನು ಕಪ್ಪು ಶಾಹಿಯ ಪೆನ್ನಿನಿಂದ ಬರೆದಿರುತ್ತೇನೆ. ನನ್ನ ಮನೆಯಲ್ಲಿ ದೂರು ಬರೆದಿರುತ್ತೇನೆ. ಬೆಳಿಗ್ಗೆ ದೂರನ್ನು ಮನೆಯಲ್ಲಿ ಬರೆದಾಗ ಎಷ್ಟು ಸಮಯ ಆಗಿತ್ತು ನನಗೆನೆನಪಿರುವುದಿಲ್ಲ, ಸಾಕ್ಷಿ ಮುಂದುವರೆದು ದೂರನ್ನು ಮನೆಯಲ್ಲಿ ಬರೆದು ನಂತರ ಟೈಪ್ ಮಾಡಿಸಿ ಠಾಣೆಗೆ ನೀಡಿರುತ್ತೇನೆ ಎಂದು ಹೇಳುತ್ತಾರೆ. ದೂರನ್ನು ಗಬ್ಬುರಿನಲ್ಲಿ ಟೈಪ್ ಮಾಡಿಸಿರುತ್ತೇನೆ. ದೂರನ್ನು ಟೈಪ್ ಮಾಡುವ ಸಂದರ್ಭದಲ್ಲಿ ಎಷ್ಟು ಸಮಯ ಆಗಿತ್ತು ಹೇಳಲು ಬರುವುದಿಲ್ಲ. ಠಾಣೆಗೆ ನಾನು, ನನ್ನ ತಂದೆ ಮತ್ತು ತಾಯಿ ಬೆಳಿಗ್ಗೆ 8-00 ಗಂಟೆಗೆ ಹೋಗಿದ್ದೆವು. ನಾವು ಠಾಣೆಗೆ ಹೋದ ವಾರ ಯಾವ ವಾರ ಆಗಿತ್ತು ಎಂದು ನೆನಪಿಲ್ಲ. ಠಾಣೆಯಲ್ಲಿ ಎಷ್ಟು ಸಮಯ ಇದ್ದೆ ಎಂದು ನನಗೆ ಈಗ ಹೇಳಲು ಬರುವುದಿಲ್ಲ. ಪೊಲೀಸ ಠಾಣೆಯಲ್ಲಿ ನಾನು ಸಹಿ ಮಾಡಿರುತ್ತೇನೆ. ದೂರಿಗೆ ನಾನು ಸಹಿ ಮಾಡಿರುತ್ತೇನೆ, ದೂರಿನಲ್ಲಿ ಬರೆದ ಅಂಶಗಳು ನನಗೆ ನೆನಪಿನಲ್ಲಿ ಇರುವುದಿಲ್ಲ. ಆರೋಪಿತರು ಮದುವೆಯ ಪ್ರಸ್ತಾವನೆಯನ್ನು ಯಾವ ದಿನಾಂಕದಂದು ನಮ್ಮ ಮನೆಗೆ ಬಂದು ಮಾಡಿರುತ್ತಾರೆ ಎಂದು ನನಗೆ ಹೇಳಲು ನೆನಪಿರುವುದಿಲ್ಲ. ಸದರಿ ಆರೋಪಿತರು ನಮ್ಮ ಮನೆಗೆ ಮದುವೆಯ ಕುರಿತು ಕೇಳಲು ಬಂದಾಗ ನಾನು ಲಿಂಗಸೂಗೂರಿನ ಉಮಾಮಹೇಶ್ವರಿ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದೆ ಎಂದರೆ ಸರಿ. ಆಗ ನನಗೆ 17 ವರ್ಷ ವಯಸ್ಸು ಇತ್ತು ಎಂದರೆ ಸಾಕ್ಷಿ ನಾನು ವಯಸ್ಕಳಾಗಿದ್ದೆ ಎಂದು ನುಡಿಯುತ್ತಾರೆ. ಸದರಿ ಮದುವೆಯ ಪ್ರಸ್ತಾಪಕ್ಕೆ ನನ್ನ ತಂದೆ-ತಾಯಿ ಅವಳಿಗೆ ಈಗ 17 ವರ್ಷ ವಯಸ್ಸಿದ್ದು ವಯಸ್ಕಳಾದ ನಂತರ ಮಾತನಾಡೋಣ ಎಂದು ಹೇಳಿದ್ದರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಮದುವೆಯು ಇಷ್ಟವಿಲ್ಲ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ಆರೋಪಿತರಿಗೆ ನನ್ನ ವಯಸ್ಸು 17 ಇದ್ದುದ್ದರಿಂದ ವಯಸ್ಕಳು ಆದ ನಂತರ ವಿಚಾರ ಮಾಡೋಣ ಅಂತಾ ಹೇಳಿದ್ದರಿಂದ 1 ನೇ ಆರೋಪಿಯ ತಾಯಿ ಅನಾರೋಗ್ಯದಿಂದ ಬಳಲುತ್ತಿದ್ದುದ್ದರಿಂದ ಬೇರೆ ಕಡೆ ಸಂಬಂಧ ನೋಡಿ ಎಂಗೇಜ್‌ಮೆಂಟ್ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರನ್ನು ಹೆದರಿಸಲು ಈ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವ ಮೊಬೈಲ್ ನಂಬರಿನಿಂದ ಯಾವ ಮೊಬೈಲ್ ನಂಬರಿಗೆ ಫೇಕ್ ಫೋಟೋಗಳನ್ನು ಕಳುಹಿಸುತ್ತಿದ್ದ ಎಂದು ಹೇಳಲು ಬರುತ್ತದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ದೂರಿನಲ್ಲಿ ನಮೂದಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಮೊಬೈಲ್ ನಂಬರ ಮತ್ತು ಫೇಕ್ ಫೋಟೋಗಳ ಕುರಿತು ನನಗೆ ಈಗ ಹೇಳಲೂ ನೆನಪಿರುವುದಿಲ್ಲ. ಆರೋಪಿ ಕಳುಹಿಸಿದ ಖಾತೆಯ ಐ.ಡಿ ನಂಬರ ನನಗೆ ಈಗ ಹೇಳಲು ನೆನಪಿರುವುದಿಲ್ಲ. ಮಾತಪಳ್ಳಿಯಲ್ಲಿ ಡಿಸೆಂಬರ 2022 ರಲ್ಲಿ ಎಂಗೇಜ್‌ಮೆಂಟ್ ಆಗಿರುತ್ತದೆ ಆದರೆ ನಿಖರವಾದ ದಿನಾಂಕ, ವಾರ ಹೇಳಲು ನೆನಪಿರುವುದಿಲ್ಲ. ನಾನು ಮಾತಪಳ್ಳಿಗೆ ಯಾವ ದಿನಾಂಕ, ತಿಂಗಳು ಮತ್ತು ವರ್ಷದಂದು ಹೋಗಿರುತ್ತೆನೆ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಮಾತಪಳ್ಳಿ ಗ್ರಾಮಕ್ಕೆ ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಎಂಗೇಜ್‌ಮೆಂಟ್ ಗಳನ್ನು ಹೆಣ್ಣಿನ ಮನೆಗಳಲ್ಲಿ ಮಾಡುತ್ತಾರೆ ಎಂದರೆ ಸರಿ. ದೂರಿನಲ್ಲಿ ಮಾತಪಳ್ಳಿಯ ಯಾವ ಸ್ಥಳದಲ್ಲಿ

ಎಂಗೇಜ್‌ಮೆಂಟ್ ಆಗಿರುತ್ತದೆ ಎಂದು ನನ್ನ ದೂರಿನಲ್ಲಿ ನಿಖರವಾದ ಸ್ಥಳ ನಮೂದಿಸಿರುವುದಿಲ್ಲ ಆದರೆ ಮಾತಪಳ್ಳಿ ಗ್ರಾಮದಲ್ಲಿ ಎಂಗೇಜ್‌ಮೆಂಟ್ ಆಗಿರುತ್ತದೆ ಎಂದು ನಮೂದಿಸಿರುತ್ತೇನೆ.

"ನಾನು ವಿದ್ಯಾಭ್ಯಾಸ ಮುಗಿಸಿದ ನಂತರ ನನ್ನ ತಂದೆ-ತಾಯಿಗಳು ಊರಿನ ಹಿರಿಯರ ಸಮಕ್ಷಮ ಮಾತಪಳ್ಳಿ ಗ್ರಾಮದ ಸುನೀಲ್ ಎಂಬ ಹುಡುಗನೊಂದಿಗೆ ನಿಶ್ಚಿತಾರ್ಥ ಮಾಡಿರುತ್ತಾರೆ" ಎಂದು ನಮೂದಿಸಿರುತ್ತಿಯಾ ಎಂಬ ಪ್ರಶ್ನೆಗೆ ಸಾಕ್ಷಿ ನಮೂದಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಸುನೀಲ್‌ನೊಂದಿಗೆ ಆಗಿರುವ ನಿಶ್ಚಿತಾರ್ಥದ ವಿಷಯ ನಾನು ಅಪ್ರಾಪ್ತೆಯಾಗಿದ್ದಾಗ ಆಗಿರುತ್ತದೆ ಎಂದು ಕುಟುಂಬ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ತಿಳಿದುಬಂದಿತ್ತು ಎಂದರೆ ಸಾಕ್ಷಿ ನಾನು ಆವಾಗ ವಯಸ್ಕಳಾಗಿದ್ದೆ ಎಂದು ನುಡಿಯುತ್ತಾರೆ. ನಾನು ಸದರಿ ಇಲಾಖೆಗೆ ನಿಜವಾದ ದಾಖಲೆಗಳನ್ನು ನೀಡದೇ ಮುಚ್ಚಿಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ನನ್ನ ವಯಸ್ಸು ಅಪ್ರಾಪ್ತೆಯಾಗಿರುವುದರಿಂದ ಸುನೀಲ್‌ನಿಗೆ ತಿಳಿದ ನಂತರ ಮದುವೆಯಾದಲ್ಲಿ ಪ್ರಕರಣ ದಾಖಲಾಗುತ್ತದೆ ಎಂಬ ವಿಚಾರ ತಿಳಿದು ಆತನೇ ಎಂಗೇಜ್‌ಮೆಂಟ್‌ನ್ನು ರದ್ದು ಮಾಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಸುನೀಲ್‌ನೇ ಎಂಗೇಜ್‌ಮೆಂಟ್ ಮುರಿದುಕೊಂಡಿದ್ದರೂ ಆರೋಪಿ ಚಂದ್ರಶೇಖರ ಮತ್ತು ಆತನ ಕುಟುಂಬದವರು ನನ್ನ ಎಂಗೇಜ್‌ಮೆಂಟ್ ಮುರಿದು ಬಿಳಲು ಕಾರಣರಾಗಿರುತ್ತಾರೆ ಎಂದು ತಪ್ಪಾಗಿ ತಿಳಿದುಕೊಂಡು ಅವರ ಮೇಲೆ ದ್ವೇಷ ಸಾಧಿಸುತ್ತಿದ್ದೇವೆ ಎಂದರೆ ಸರಿಯಲ್ಲ. ನನ್ನ ಎಂಗೇಜ್‌ಮೆಂಟ್‌ನ್ನು ಆರೋಪಿತರು ರದ್ದುಗೊಳಿಸಿರುತ್ತಾರೆ ಎಂದು ತಿಳಿದು ಅವರಿಗೆ ತೊಂದರೆ ಕೊಡಲು ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ದಿನಾಂಕ 22-01-2023 ರಂದು ನಾನು ಮನೆಯಲ್ಲಿದ್ದೆ. ಆಗ ನನ್ನೊಂದಿಗೆ ನನ್ನ ತಾಯಿ, ನನ್ನ ತಮ್ಮ ಮತ್ತು ಅಜ್ಜಿ ಇದ್ದೆವು. ಆಗ ನನ್ನ ತಂದೆ ಮನೆಯಿಂದ ಹೊರಗಡೆ ಹೋಗಿದ್ದರು. ಗಲಾಟೆ ನಡೆಯುವಾಗ ನಮ್ಮ ತಂದೆ ಮನೆಗೆ ಬಂದಿರುತ್ತಾರೆ.

ನಾವು "ಘಟನೆಯ ನಂತರ ನಮ್ಮ ತಂದೆ ಊರಲ್ಲಿ ಇರದ ಕಾರಣ ಜೀವ ಭಯದಿಂದ ಪಿರ್ಯಾದಿ ಕೊಟ್ಟಿರಲಿಲ್ಲ" ಎಂದು ನನ್ನ ದೂರಿನಲ್ಲಿ ನಮೂದಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಯಾವ ಆರೋಪಿ ನನಗೆ ಮತ್ತು ನನ್ನ ತಾಯಿಗೆ ಎಷ್ಟೆಷ್ಟು ಏಟುಗಳನ್ನು ಹೊಡೆದಿರುತ್ತಾರೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ ಆದರೆ ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ. ಘಟನೆಯಾದ ನಂತರ ನಾವು ಆಸ್ಪತ್ರೆಗೆ ತೋರಿಸಿರುವುದಿಲ್ಲ. ಘಟನೆ ನಡೆದಾಗ ಅಂದಾಜು 20-30 ಜನರು ಇದ್ದರು. ಸದರಿಯವರೆಲ್ಲರ ಹೆಸರು, ವಿಳಾಸ ಹೇಳಲು ಬರುವುದಿಲ್ಲ ಕೇವಲ ಇಬ್ಬರ ಹೆಸರು ಹೇಳಲು ಬರುತ್ತದೆ. ಘಟನೆಯಲ್ಲಿ ಬಟ್ಟೆಗಳು ಹರಿದಿದ್ದವು. ಹರಿದ ಬಟ್ಟೆಗಳನ್ನು ಪೊಲೀಸರಿಗೆ ನೀಡಿಲ್ಲ. ದೂರನ್ನು ನೀಡಲು ಆಗಿರುವ ವಿಳಂಬಕ್ಕೆ ಕಾರಣಗಳನ್ನು ನಮೂದಿಸಿರುತ್ತಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಮೂದಿಸಿರುವುದಿಲ್ಲ ಸಾಕ್ಷಿ ಮುಂದುವರೆದು ನನ್ನ ಅಜ್ಜಿಗೆ ಸಕ್ಕರೆ ಕಾಯಿಲೆ ಹೆಚ್ಚಾಗಿದ್ದರಿಂದ ಅವರನ್ನು ನನ್ನ ತಂದೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಮನೆಯಲ್ಲಿ ನನ್ನ ತಂದೆ ಇಲ್ಲದೇ ಇರುವುದರಿಂದ ದೂರು ನೀಡಲು

ವಿಳಂಬವಾಗಿರುತ್ತದೆ ಎಂದು ನುಡಿಯುತ್ತಾರೆ. ಪೊಟೋವನ್ನು ನಮ್ಮ ಮನೆಯ ಹಾಲ್‌ನಲ್ಲಿ ತೆಗೆದಿರುತ್ತಾರೆ. ಸದರಿ ಪೊಟೋವನ್ನು ಪೊಲೀಸರು ತೆಗೆದಿರುತ್ತಾರೆ. ಎಷ್ಟು ಪೊಟೋ ತೆಗೆದಿರುತ್ತಾರೆ ನನಗೆ ಗೊತ್ತಿಲ್ಲ. ಪೊಟೋ ತೆಗೆಯುವ ಕಾಲಕ್ಕೆ ಮನೆಯಲ್ಲಿ ಎಷ್ಟು ಜನ ಇದ್ದೆವು ಎಂದು ನನಗೆ ಈಗ ನೆನಪಿರುವುದಿಲ್ಲ. ದೂರು ದಾಖಲಿಸಿದ ದಿನ ಮಧ್ಯಾಹ್ನ 3-00 ಗಂಟೆಯ ಸುಮಾರಿಗೆ ಪೊಲೀಸರು ನನ್ನ ಮನೆಗೆ ಬಂದಿರುತ್ತಾರೆ. ಪೊಲೀಸರು ನಮ್ಮ ಮನೆಗೆ ಬಂದಾಗ ಜನರೂ ಸಹ ಬಂದಿದ್ದರು ಎಷ್ಟು ಜನರು ಬಂದಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಚೆಕ್ಬಂದಿಯನ್ನು ಮನೆಯ ಹೊರಗಡೆ ಬರೆದಿರುತ್ತಾರೆ. ಘಟನೆ ಮನೆಯ ಒಳಗಡೆ ಆಗಿರುತ್ತದೆ. ಘಟನೆ ಮನೆಯ ಹೊರಗಡೆ ಆಗಿರುವುದಿಲ್ಲ. ಯಾವುದೇ ಘಟನೆ ಆಗದೇ ಇದ್ದರೂ ಆರೋಪಿತರು ದಿನಾಂಕ 22-01-2023 ರಂದು ಬೆಳಿಗ್ಗೆ 11-00 ಗಂಟೆಗೆ ನಮ್ಮ ಮನೆಗೆ ಬಂದು ನಮ್ಮೊಂದಿಗೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ನಮ್ಮ ಬಟ್ಟೆ ಹಿಡಿದು ಎಳೆದಾಡಿ ಅವಮಾನಪಡಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.